# ನಾ ನಿನ್ನ ಧ್ಯಾನದೊಳಿರಲು ರಂಗ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao
3. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru.
4. **Ref.:** Lyrics mentioned without highlights are as per Ref. 1. The wordings in Ref. 2 are similar to Ref. 1. The wordings in Ref. 3 are slightly different and are given in yellow highlights.
5. **Note:** Singer has followed lyrics as in Ref. 1.

| | |
|---|---|
| ರಾಗ: ಕಾನಡ ತಾಳ: ರೂಪಕ | ರಾಗ: ಕಾನಡ ತಾಳ: ಅಟ್ಟ |
| | |
| ನಾ ನಿನ್ನ ಧ್ಯಾನದೊಳಿರಲು, ಮಿಕ್ಕ | ನಾ ನಿನ್ನ ಧ್ಯಾನದೊಳಿರಲು, ಇಂಥ |
| ಹೀನಮಾನವರೇನು ಮಾಡಬಲ್ಲರೋ ರಂಗ ‖ ಪ ‖ | ಹೀನ ಮಾನವರಿಂದೇನಾಹೋದು ಹರಿಯೆ |
| | |
| ಮಚ್ಚರಿಸುವರೆಲ್ಲ ಕೂಡಿ ಮಾಡುವರೇನು | ಮಚ್ಚರಿಸಿದರೇನ ಮಾಡಲಾಪರೊ ಎನ್ನ |
| ಅಚ್ಯುತ ನಿನ್ನದೊಂದು ದಯೆಯಿರಲು | ಅಚ್ಯುತ ನಿನ್ನದೊಂದು ದಯವಿರಲು |
| ವಾತ್ಸಲ್ಯ ಬಿಡದಿರು ನಿನ್ನ ನಂಬಿದೆ ದೇವ | ವಾಚ್ಛಲ ಬಿಡದಿರು ನಿನ್ನ ನಂಬಿದ ಮೇಲೆ |
| ಕಿಚ್ಚಿಗೆ ಇರುವೆ ಮುತ್ತುವುದೆ ಕೇಳೆಲೋ ರಂಗ ‖ 1 ‖ | ಕಿಚ್ಚಿಗೆ ಗೊರಲೆ ಮುತ್ತುವುದೆ ಕೇಳೆಲೊ ರಂಗ |
| | |
| ಧೂಳಿಲಿ ಕುದುರೆ ವೈಯಾರದಿ ಕುಣಿಯಲು | ದಾಳಿಯಲಿ ತೇಜಿ ವೈಹಾಳಿಯಲಿ ನಡೆಯಲು |
| ಧೂಳು ರವಿಯ ಮೇಲೆ ಮುಸುಕುವುದೆ | ಧೂಳು ರವಿಗೆ ತಾನು ಮುಸುಕುವುದೆ |
| ತಾಳಿದವರಿಗೆ ವಿರುದ್ಧ ಲೋಕದೊಳುಂಟೆ | ತಾಳಿದವರಿಗೆ ವಿರುದ್ಧ ಲೋಕದೊಳುಂಟೆ |
| ಗಾಳಿಗೆ ಗಿರಿಯು ಅಲ್ಲಾಡಬಲ್ಲುದೆ ರಂಗ ‖ 2 ‖ | ಗಾಳಿಗೆ ಗಿರಿ ನಡುಗುವುದೆ ಕೇಳೆಲೊ ರಂಗ |
| | |
| ಕನ್ನಡಿಯೊಳಗಿನ ಗಂಟು ಕಂಡು ಕಳ್ಳ | ಕನ್ನಡಿಯೊಳಗಿನ ಗಂಟ ಕಂಡು ಕಳ್ಳ |
| ಕನ್ನವಿಕ್ಕಲವನ ವಶವಹುದೆ | ಕನ್ನವಿಕ್ಕಲು ವಶವಾಗುವುದೆ |
| ನಿನ್ನ ನಂಬಲು ಮುದ್ದು ಪುರಂದರ ವಿಠಲ | ನಿನ್ನ ಧ್ಯಾನವ ಮಾಡೆ ಪುರಂದರ ವಿಠಲನೆ |
| ಚಿನ್ನಕ್ಕೆ ಪುಟವಿಟ್ಟಂತೆ ಅಹುದು ರಂಗ ‖ 3 ‖ | ಚಿನ್ನಕ್ಕೆ ಪುಟವಿಕ್ಕಿದಂತೆ ಕೇಳೆಲೊ ರಂಗ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಮಚ್ಚರಿಸುವರೆಲ್ಲ –** ನನ್ನಲ್ಲಿ ಅಸೂಯೆಗೊಂಡು ನಾನು ಹಾಳಾಗುವುದನ್ನೇ ಬಯಸುವವರು.

**ಕಿಚ್ಚಿಗೆ –** ಬೆಂಕಿಗೆ.

**ಧಾಳಿಲಿ –** ದಾಳಿ, ಯುದ್ಧದಲ್ಲಿ.

**ವೈಹಾಳಿ** = (ತತ್ಸಮ: ವಾಹ್ಯಾಲಿ) ಕುದುರೆಗಳ ಪಂದ್ಯ

**Classification:** Keerthane
**Ankita:** purandara vittala
**Location:** NA
**Category:** Navaratna Malike, Bhakti,
**Sub-Category:** dhyAna, nara, ranga, achyuta, daya, deva, kudure, loka, parvata, kannadi, kalla, bangara,
**Pravachana:** NA
**Explanation:** NA